ಉಜ್ಜುತ್ತಿದ್ದರು. ಮಸಾಜು ಮಾಡುವಾಗ, ನನಗೆ ಮೃದು ಸ್ವರದಲ್ಲಿ, 'ಮಗು, ಶರೀರವನ್ನು ಸಡಿಲ ಬಿಡು, ಎಲ್ಲವನ್ನೂ ಸರ್ವಶಕ್ತಿವಂತ ದೇವರಿಗೆ ಬಿಡು' ಎನ್ನುತ್ತಿದ್ದರು. ನನಗೆ ತುಂಬಾ ಶಾಂತಿ ಲಭಿಸುತ್ತಿತ್ತು. ಶರೀರದ ಬಿಗುವು ಮರೆಯಾಗುತ್ತಿತ್ತು. ನಾನು ಅವರ ಹಾಸಿಗೆಯಲ್ಲಿ ಮಲಗಿಬಿಡುತ್ತಿದ್ದೆ. ತದನಂತರದಲ್ಲಿ ಅವರಿಂದ ಪ್ರೇರಣೆಗೊಳಗಾಗಿ, ಅವರಿಂದ ಮಸಾಜು ಮಾಡುವ ತರಬೇತಿಯನ್ನು ಪಡೆದೆ.

ಮೌರೀನ್ ನಂಬಲರ್ಹ ಮಹಿಳೆಯಾಗಿದ್ದರು. ನಾನು ಅವರಿಗೆ ನನ್ನೆಲ್ಲಾ ವಿಷಯಗಳನ್ನು ಹೇಳುತ್ತಿದ್ದೆ; ನನ್ನ ದುಃಖ ಮತ್ತು ನೋವನ್ನು ಹೇಳುತ್ತಿದ್ದೆ. ಅವರನ್ನು ಭೇಟಿಯಾದಾಗಲೆಲ್ಲಾ, 'ನಾನು ಅಬ್ರಹಾಮ್‌ನನ್ನು ತ್ಯಜಿಸುತ್ತೇನೆ, ಆ ನೀಚ, ಹೆಂಗಸರ ಖಯಾಲಿಯನ್ನು ಹೊಂದಿದ ವ್ಯಕ್ತಿಯೊಂದಿಗೆ ಇರುವುದಿಲ್ಲ' ಎನ್ನುತ್ತಿದ್ದೆ.

ಮೌರೀನ್ ಮೆಲ್ಲನೆ ನಕ್ಕು ಹೇಳುತ್ತಿದ್ದರು, 'ನೀನು ನಿನ್ನ ಪರಿವಾರವನ್ನು ಮುಗಿಸುವ ಬಗ್ಗೆ ಹೇಳುತ್ತಿದ್ದೀಯ.'

'ಹಾಗಾದರೆ ಏನು ಮಾಡಲಿ?'

'ಆಟವನ್ನು ಜಿಗುಪ್ಸೆಯಿಂದ ನೋಡು, ಕ್ರೀಡಾಪಟುವನ್ನು ಜಿಗುಪ್ಸೆಯಿಂದ ನೋಡಬೇಡ. ಆ ರೋಮಿಯೊ ಕಡೇಪಕ್ಷ ಸುಳ್ಳುಗಾರ ಅಥವಾ ವಂಚಕನಲ್ಲ. ತಾನು ಒಬ್ಬ ಹೆಂಗಸಿನಿಂದ ಸಂತುಷ್ಟನಾಗಲ್ಲ, ತನಗೆ ಹೆಚ್ಚು ಹೆಂಗಸರು ಬೇಕು ಎಂದು ಪ್ರಾಮಾಣಿಕವಾಗಿ ಹೇಳಿದ್ದಾನೆ. ಬಹುಶಃ ಅವನು ಈ ಲೈಂಗಿಕ ಪಾಪಗಳ ವಿರುದ್ಧ ತನ್ನನ್ನು ಬಲಹೀನನೆಂದು ತಿಳಿದು, ದಾರಿ ತಪ್ಪುತ್ತಿರಬಹುದು.'

'ಅವನು ಸುಳ್ಳುಗಾರ, ವಂಚಕ. ಪ್ರಾಮಾಣಿಕವಾಗಿ, ತನಗೆ ಬೇರೆ ಮಹಿಳೆಯರೊಂದಿಗೆ ಸಂಬಂಧವಿದೆ ಎಂದರೆ, ನಾನು ಅವನ ಪರವಾಗಿದ್ದು, ಅವನು ಮಾಡುವುದನ್ನು ನೋಡುತ್ತಿರಲೇ?'

'ಬೇಡ, ಪತಿಯನ್ನು ಅನ್ಯ ಮಹಿಳೆಯರಿಂದ ಬಿಡಿಸು.'

'ಯಾರು ಯಾರಿಂದ ಅಂತ ಬಿಡಿಸಲಿ...?'

'ನೋಡು, ಒಬ್ಬ ಮನುಷ್ಯ ಏಕೆ ಮೋಸ ಮಾಡುತ್ತಾನೆ ಎಂಬುದಕ್ಕೆ ನೇರ ಉತ್ತರವಿಲ್ಲ. ನನಗೆ ತಿಳಿದಿರುವಂತೆ, ಮನೆಯಲ್ಲಿ ಸಿಗದ ವಸ್ತುವಿಗಾಗಿ ಮನುಷ್ಯ ಹೊರಗೆ ಹೋಗುತ್ತಾನೆ.'

'ನೀವೇನು ಹೇಳಲು ಬಯಸುತ್ತೀರ?' ನಾನು ಮೌರೀನರನ್ನು ದುರುಗುಟ್ಟಿ ನೋಡಿದೆ. ನನ್ನ ಕಣ್ಣುಗಳು ತುಂಬಿ ಬಂದವು.

ಮೌರೀನ್ ನನ್ನನ್ನು ಬಾಹುಗಳಲ್ಲಿ ಬಂಧಿಸಿಕೊಂಡು ಹೇಳಿದರು, 'ಇಲ್ಲ ಮಗು, ನಿನ್ನನ್ನು ಅವಮಾನಿಸಲು ನಾನು ಹೀಗೆ ಹೇಳಲಿಲ್ಲ. ನಿನ್ನಲ್ಲಿ ಯಾವುದೇ ಕೊರತೆಯಿಲ್ಲ. ನೀನು ಸುಂದರವಾಗಿದ್ದೀಯ, ಯುವತಿಯಾಗಿದ್ದೀಯ, ಸದಾ ಕಾರ್ಯತತ್ಪರಳಾಗಿರುತ್ತೀಯ. ಥಿಂಕ್ ಬಿಗ್'

'ಥಿಂಕ್ ಬಿಗ್!'

'ಹೌದು, ಪ್ರಾಕ್ಟಿಕಲ್ ಆಗು. ಮ್ಯಾರಿಟಲ್ ಥೆರಪಿ ತೆಗೆದುಕೋ. ನಿನ್ನ ಭವಿಷ್ಯವನ್ನು ಸುರಕ್ಷಿತ ಮಾಡಿಕೋ, ಹಣವನ್ನು ಉಳಿಸು. ನಿನ್ನ ಮಗನನ್ನು ಇದರಿಂದ ದೂರವಿಡು, ನಿನ್ನ ಪತಿ ಮತ್ತು ನಿನ್ನ ಅಸಿಡಿಟಿಯನ್ನು ಪರೀಕ್ಷಿಸಿಕೋ.'

ನಾನು ನನ್ನ ತಲೆ ಹಿಡಿದು ಕೂತೆ. ಮೌರೀನರ ತಪ್ಪೇನು? ಅವರು ತಮ್ಮ ದೃಷ್ಟಿಕೋನದಂತೆ ಹೇಳುತ್ತಾರೆ. ನಾನೇ ಅವರ ಮನೆಗೆ ಹೋಗಿ ನನ್ನ ದುಃಖವನ್ನು ಹೇಳಿಕೊಳ್ಳುತ್ತಿದ್ದೆ. ನನಗೆ ಅವರು ಏನಾದರು ಸಲಹೆಯನ್ನು ಕೊಡಬೇಕಿತ್ತಲ್ಲ?

'ನಿನ್ನೆ ರೋಮಿಯೊ ಮನೆಗೆ ಬಂದಾಗ, ಲೇಡಿಸ್ ಸೆಂಟ್ ಸುವಾಸನೆ ಬರುತ್ತಿತ್ತು...'

ನಾನು ಶಾಲೆಯಿಂದ ಮನೆಗೆ ಹೋಗದೆ ನೇರವಾಗಿ ಮೌರೀನರ ಬಳಿಗೆ ಹೋಗಿದ್ದೆ. ಮಧ್ಯಾಹ್ನವಾಗಿತ್ತು. ಮೌರೀನರಿಗೆ ನಾನು ಬರುವ ಸೂಚನೆಯನ್ನು ಫೋನ್ ಮೂಲಕ ಕೊಟ್ಟಿದ್ದೆ. ರಾತ್ರಿಯಿಡಿ ನಿದ್ರಿಸಿಲ್ಲ, ತಲೆ ನೋವಿನಿಂದ ಸಿಡಿಯುತ್ತಿದೆ, ಶಾಲೆಯಲ್ಲಿ ಹೇಗೋ ನಿಂತು ಮಕ್ಕಳಿಗೆ ಪಾಠ ಹೇಳಿದೆ, ಈಗ ನಿಮ್ಮ ಮನೆಗೆ ಬಂದು ತಲೆಯನ್ನು ಒತ್ತಿಸಿಕೊಳ್ಳಬೇಕಿದೆ ಎಂದೂ ಹೇಳಿದ್ದೆ.

ಮೌರೀನರು ಹರ್ಬಲ್ ಪ್ಯಾಕ್, ಔಷಧೀಯ ಬಾಟಲಿ ಮತ್ತು ಬಿಸಿ ಎಣ್ಣೆಯನ್ನು ಮೊದಲೇ ಸಿದ್ಧಪಡಿಸಿಟ್ಟುಕೊಂಡಿದ್ದರು. ನಾನು ಸಮುದ್ರದ ತೀರದಲ್ಲಿ, ಅವರ ಅಂಗಳದಲ್ಲಿ ಒಂದು ಆರಾಮ ಕುರ್ಚಿಯಲ್ಲಿ ಮೈಚಾಚಿ ಮಲಗಿದ್ದೆ. ಅವರು ನನ್ನ ತಲೆ, ಕತ್ತು ಮತ್ತು ಭುಜಗಳಿಗೆ ಮಸಾಜ್ ಮಾಡುತ್ತಿದ್ದರು. ನಾನು ಕಣ್ಣುಗಳನ್ನು ಮುಚ್ಚಿಕೊಂಡು ಬಡಬಡಿಸುತ್ತಿದ್ದೆ.

'ಮಜನೂಗೆ ಹೊಸ ಸ್ಟೈಲ್‌ನ ಉಡುಪುಗಳು ಸಿದ್ಧವಾಗಿ ಬಂದಿವೆ. ಎಲ್ಲಿಗಾದರು ಹೋಗುವಾಗ ಮೊದಲು ಕನ್ನಡಿ ಎದುರು ಗಂಟೆಗಟ್ಟಲೆ ನಿಂತು ನೋಡಿಕೊಳ್ಳುತ್ತಾರೆ. ನಂತರ ತಿದ್ದಿತೀಡಿಕೊಂಡು ಮನೆಯಿಂದ ಹೋಗುತ್ತಾರೆ. ಚಪ್ಪಲಿಗಳನ್ನು ನಿತ್ಯ ಪಾಲೀಶ್ ಮಾಡಿ, ಹೊಳೆಯುವಂತೆ ಮಾಡುತ್ತಾರೆ. ಗಡ್ಡವನ್ನು ಎಚ್ಚರಿಕೆಯಿಂದ ಟ್ರಿಮ್ ಮಾಡಿಕೊಳ್ಳುತ್ತಾರೆ. ಸೆಂಟಿನ ಹೊಸ ಹೊಸ ಬಾಟಲಿಗಳನ್ನು ಖರೀದಿಸುತ್ತಾರೆ. ಸಾಹೇಬರು ಮನೆಯಿಂದ ಕಂಪು ಸೂಸುತ್ತಾ ಹೊರಡುತ್ತಾರೆ. ಮರಳಿ ಬಂದಾಗ ಹೊಸ ರೊಮಾನ್ಸ್‌ನ ಸುಖ ಮತ್ತು ನನ್ನನ್ನು ವಂಚಿಸಿದ ಅಪರಾಧಪ್ರಜ್ಞೆ ಅವರ ಮುಖದಲ್ಲಿ ಮೂಡಿರುತ್ತದೆ, ಇದನ್ನು ನಾನು ಗಮನಿಸುತ್ತೇನೆ.'

'ನಿನ್ನ ಗಂಡ ಒಬ್ಬ ಮನೋರೋಗಿ. ಅವನು ಕಾಮಪಿಪಾಸು ರೋಗಿ. ಅವನ ಕಾಮುಕತನ ಅನಿಯಂತ್ರಿತವಾಗಿದೆ. ಪರಸ್ತ್ರೀಯರನ್ನು ಸಂಭೋಗಿಸುವ ಮನುಷ್ಯ ಮೂರ್ಖನಾಗಿದ್ದು, ಅವನು ಹೀಗೆ ಮಾಡದಿದ್ದರೆ, ತನ್ನ ನಾಶವನ್ನೇ ಮಾಡಿಕೊಳ್ಳುತ್ತಾನೆ. ಅವನ ಶರೀರದಲ್ಲಿರುವ ಸೈತಾನನನ್ನು ಒದ್ದೋಡಿಸು. ಅವನಿಗೆ ಚಿಕಿತ್ಸೆಯನ್ನು ಕೊಡಿಸು.'

'ಅವನಿಗೆ ಎಲ್ಲಿ ಚಿಕಿತ್ಸೆಯನ್ನು ಮಾಡಿಸಲಿ? ಅವನು ತನ್ನನ್ನು ರೋಗಿ ಎಂದು ಮೊದಲು ತಿಳಿಯಬೇಕಲ್ಲ?' ನಾನು ಹತಾಶೆಯಿಂದ ಹೇಳಿದೆ.

'ನೋಡು, ನಮ್ಮ ಸಮಾಜದಲ್ಲಿ ಎಲ್ಲೆಲ್ಲೂ ಲಜ್ಜೆಗೇಡಿತನ ಕಾಣಬರುತ್ತಿದೆ. ದುಃಖದ ಸಂಗತಿ ಎಂದರೆ, ಇದು ಚರ್ಚ್ ಮತ್ತು ಮಂದಿರಗಳಲ್ಲೂ ಕಾಣಬರುತ್ತದೆ. ಕೆಲವು ಪುರುಷರು, ಬಿಗಿ ಉಡುಪು ಧರಿಸಿದ ಮತ್ತು ಉತ್ತೇಜನಕಾರಿ ಉಡುಪುಗಳನ್ನು ಧರಿಸಿ ಓಡಾಡುವ ಮಹಿಳೆಯರನ್ನು ನೋಡಿ ಆಕರ್ಷಿತರಾಗುತ್ತಾರೆ! ನೀನು ನಿನ್ನ ಗಂಡನನ್ನು ನಿನ್ನ ವಶದಲ್ಲಿಟ್ಟುಕೊಳ್ಳಬೇಕಾಗುವುದು. ಪತಿ ವಶೀಕರಣ ವಿದ್ಯೆಯನ್ನು ಕಲಿ.'

'ಗಂಡನನ್ನು ವಶಪಡಿಸಿಕೊಳ್ಳುವ ಮಂತ್ರ ತಂತ್ರ ನಾನು ಮಾಡಬೇಕಿಲ್ಲ...' ನಾನು ಜಿಗುಪ್ಸೆಯಿಂದ ಹೇಳುತ್ತಿದ್ದೆ.

'ಹಾಗಾದರೆ, ಹೇಗೆ ನಡೆದುಕೊಂಡು ಹೋಗುತ್ತಿದೆಯೋ, ಹಾಗೆಯೇ ನಡೆದುಕೊಂಡು ಹೋಗಲು ಬಿಡು... ಎಲ್ಲವನ್ನೂ ದೇವರ ಮೇಲೆ ಹಾಕು...'

ಇದನ್ನು ಹೊರತುಪಡಿಸಿ, ಬೇರೇನು ತಾನೇ ಮಾರ್ಗವಿತ್ತು? ನನಗೆ ಆಶ್ಚರ್ಯವಾಗುತ್ತದೆ... ಜನ ಅದು ಹೇಗೆ ದ್ವಿಮುಖ ಜೀವನವನ್ನು ಸಾಗಿಸುತ್ತಾರಲ್ಲ! ನಾನು ಅಬ್ರಾಹಮ್‌ನ ಕಾಮುಕತನದಿಂದ ಬೇಸತ್ತಿದ್ದೆ. ನನ್ನ ಮನಸ್ಸು, ಶರೀರ ಮತ್ತು ಆತ್ಮ ಹೆಚ್ಚು ಸಹಿಸಿಕೊಳ್ಳಲು ಸಾಧ್ಯವಿರಲಿಲ್ಲ. ಎಲ್ಲಿಗೆ ಹೋಗಲಿ? ಏನು ಮಾಡಲಿ? ನೀಲ್ ಇದ್ದ, ಅವನಿಗೆ ನನ್ನ ಮನೋವ್ಯಥೆಯನ್ನು ಹೇಳುತ್ತಿದ್ದೆ. ಅವನು ಪದೇಪದೇ ನನಗೆ ಸಿಟ್ಟಿನಿಂದ, ನೀನೇಕೆ ಅಂಥ ಮನುಷ್ಯನೊಂದಿಗೆ ಇದ್ದೀಯ? ಅವನನ್ನು ಏಕೆ ಬಿಡುತ್ತಿಲ್ಲ? ಎನ್ನುತ್ತಿದ್ದ.

'ಗಂಡನನ್ನು ಬಿಡುವುದು ಅಷ್ಟು ಸುಲಭವಲ್ಲ,' ನಾನು ನೀಲ್‌ಗೆ ಹೇಳುತ್ತಿದ್ದೆ, 'ಅವನು ನನ್ನನ್ನು ತುಂಬಾ ಪ್ರೀತಿಸುತ್ತಾನೆ. ನನ್ನೆಲ್ಲಾ ಆಸೆಯನ್ನು ಈಡೇರಿಸುತ್ತಾನೆ.'

'ಹೂಂ, ಎಲ್ಲಾ ಆಸೆಯನ್ನು ಈಡೇರಿಸುತ್ತಾನೆ!' ನೀಲ್ ಕೆರಳಿದ, 'ಹೆಂಗಸರ ಸಹವಾಸ ಮಾಡಬಾರದು ಎಂಬುದು ನಿನ್ನ ಇಚ್ಛೆಯಾಗಿದೆ, ಇದನ್ನು ಅವನು ಈಡೇರಿಸಿದ್ದಾನೆಯೇ?'

'ಅವನು ಮಾನಸಿಕ ರೋಗಿ, ಜಗತ್ತಿನಲ್ಲಿ ನಾನಾ ರೀತಿಯ ಚಟಗಳು — ಮದ್ಯದ ಚಟ, ಸಿಗರೇಟ್ ಚಟ, ಲೈಂಗಿಕ ಚಟ ಹೀಗೆ ಅನೇಕ ಚಟಗಳು ಮನುಷ್ಯರಿಗೆ ಇರುತ್ತವೆ...'

'ಹಾಗಾದರೆ ಸಾಹೇಬರಿಗೆ ಸೆಕ್ಸ್ ಅಡಿಕ್ಷನ್ ಇದೆ!' ನೀಲ್ ಖಾರವಾಗಿ ಹೇಳಿದ, 'ಇದಕ್ಕೆ ಚಿಕಿತ್ಸೆ ಏನು?'

'ಸೈಕಾಲಜಿಸ್ಟ್ ಕೌನ್ಸಲಿಂಗ್ ಮತ್ತು ಬಿಹೇವಿಯರ್ ಮಾಡಿಫಿಕೇಶನ್ ಆಧಾರದಲ್ಲಿ ಸೆಕ್ಸ್ ಅಡಿಕ್ಷನ್ ಚಿಕಿತ್ಸೆಯನ್ನು ಮಾಡಲಾಗುತ್ತದೆ, ರೋಗಿಯ ಯೋಚನೆಗಳಲ್ಲಿ ಬದಲಾವಣೆಯನ್ನು ತರುವ ಪ್ರಯತ್ನ ಮಾಡಲಾಗುತ್ತದೆ.'

ನಾನು ಅಬ್ರಾಹಮ್‌ನನ್ನು ಅನೇಕ ಬಾರಿ ಸೈಕಾಲಜಿಸ್ಟ್‌ರ ಬಳಿಗೆ ಹೋಗಲು ಸಲಹೆಯಿತ್ತೆ, ಆದರೆ ಅವನು ನನ್ನ ಮಾತನ್ನು ಮುಂದಕ್ಕೆ ಹಾಕುತ್ತಾ, 'ಸೆಕ್ಸ್ ಬಯಕೆಯುಳ್ಳವರು ಸೆಕ್ಸ್ ಅಡಿಕ್ಟ್ ಎನ್ನಿಸಿಕೊಳ್ಳಲಾರ' ಎನ್ನುತ್ತಿದ್ದ.

(ಸಶೇಷ)

'ಕಡೇ ಪಕ್ಷ ನಿಮ್ಮ ಅಸಿಡಿಟಿಯನ್ನಾದರೂ